# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು–560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 10.12.2010**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಬರುವ ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಯಲ್ಲಿ ರಸ್ತೆ ಗುಂಡಿ ಮುಚ್ಚುವ ಕಾರ್ಯ ಕೈಗೆತ್ತಿಕೊಂಡಿದ್ದು, ವಾರ್ಡ್–182, ಪದ್ಮನಾಭನಗರ, ವಾರ್ಡ್–161, ಹೊಸಕೆರೆಹಳ್ಳಿ, ವಾರ್ಡ್–183, ಚಿಕ್ಕಲ್ಲಸಂದ್ರ, ವಾರ್ಡ್–169, ಭೈರಸಂದ್ರ, ವಾರ್ಡ್–178, ಸಾರಕ್ಕಿ, ವಾರ್ಡ್–128, ನಾಗರಭಾವಿ, ವಾರ್ಡ್–126, ಮಾರುತಿನಗರ, ವಾರ್ಡ್–162, ಗಿರಿನಗರ, ವಾರ್ಡ್–172, ಮಡಿವಾಳ ಮತ್ತು ವಾರ್ಡ್–176, ಬಿ.ಟಿ.ಎಂ. ಲೇಔಟ್ ಪ್ರದೇಶಗಳಲ್ಲಿನ ರಸ್ತೆಗಳಲ್ಲಿ ಇರುವಂತಹ ರಸ್ತೆಗುಂಡಿಗಳನ್ನು ಮುಚ್ಚಿ, ಇಂದು ಈ ಮೇಲ್ಕಂಡ ವಾರ್ಡ್‌ಗಳನ್ನು ರಸ್ತೆ ಗುಂಡಿಗಳ ಮುಕ್ತ ವಾರ್ಡ್‌ಗಳೆಂದು ಘೋಷಿಸಲಾಗಿದೆ ಎಂದು ಪಾಲಿಕೆ ಆಯುಕ್ತರಾದ ಶ್ರೀ ಸಿದ್ದಯ್ಯ ರವರು ತಿಳಿಸಿದ್ದಾರೆ.

ಈ ವಲಯದಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವಂತಹ ಕಾಮಗಾರಿಯನ್ನು ತೀವ್ರವಾಗಿ ಕೈಗೆತ್ತಿಕೊಂಡು ಪ್ರಮುಖ ರಸ್ತೆಗಳಲ್ಲಿ ಇರುವ ಗುಂಡಿಗಳನ್ನು ಮುಚ್ಚಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ ಎಂದು ಮುಖ್ಯ ಅಭಿಯಂತರರಾದ ಶ್ರೀ ಅನಂತಸ್ವಾಮಿ ರವರು ತಿಳಿಸಿದ್ದಾರೆ. ಈ ಸಂಬಂಧ ದೂರುಗಳೇನಾದರು ಇದ್ದರೆ ಸಾರ್ವಜನಿಕರು ಮುಖ್ಯ ಅಭಿಯಂತರರ ದೂರವಾಣಿ ಸಂಖ್ಯೆ: 9880201881 ಸಂಪರ್ಕಿಸಬಹುದು.

**ಸಾರ್ವಜನಿಕ ಸಂಪರ್ಕಾಧಿಕಾರಿ**